1	2	3	4	5	6	7
20-5-96	81	16	15	25	56	05
21-5-96	81	14	17	23	54	05
22-5-96	81	15	11	25	51	06
23-5-96	81	14	13	23	50	08
24-5-96	81	16	14	26	56	07
25-5-96	81	18	12	27	57	08
26-5-96	81	15	12	23	50	10
27-5-96	81	14	15	24	53	10
28-5-96	81	08	15	24	47	10
29-5-96	81	08	07	23	38	09
(ಮೊಹರಂ)						
30-5-96	81	10	13	25	48	10
31-5-96	81	10	15	26	51	07

ಕ್ರ.ಸಂ. 7ರಲ್ಲಿ ಕಾಣಿಸಿರುವ ಸಿಬ್ಬಂದಿಗಳಿಗೆ ಆಪಾದನಾ ಪತ್ರ ನೀಡಲಾಗಿದ್ದು, ಶಿಸ್ತುಕ್ರಮ ಜಾರಿಯಲ್ಲಿದೆ.

ವಿಷಯ:- ಹಿರೇಕೆರೂರು ತಾಲ್ಲೂಕಿನಲ್ಲಿ ಕೈಗೊಳ್ಳಲಿರುವ ತೋಟಗಾರಿಕೆ ಯೋಜನೆಗಳು.

1427 (2402) **ಶ್ರೀ ಯು.ಬಿ. ಬಣಕಾರ್:-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರ ತಾಲ್ಲೂಕಿನಲ್ಲಿ 1996-97ನೇ ಸಾಲಿನಲ್ಲಿ ಯಾವ ಯಾವ ತೋಟಗಾರಿಕಾ ಯೋಜನೆಗಳಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ?

ಶ್ರೀ ಡಿ.ಟಿ. ಜಯಕುಮಾರ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಹಿರೇಕೆರೂರು ತಾಲ್ಲೂಕಿನಲ್ಲಿ 1996-97ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖಾ ವತಿಯಿಂದ 18 ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದ್ದು ಒಟ್ಟು 6,31,978.00 ರೂ. ಗಳ ಆಯವ್ಯಯದಲ್ಲಿ ಈ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. 1996-97ನೇ ಸಾಲಿನಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳಲ್ಲಿ ಹಮ್ಮಿಕೊಂಡಿರುವ ವಿವರಗಳನ್ನು ಅನುಬಂಧ '1' ರಲ್ಲಿ ಲಗತ್ತಿಸಿದೆ.

ಅನುಬಂಧ–1

1996-97ನೇ ಸಾಲಿನಲ್ಲಿ ಧಾರವಾಡ ಜಿಲ್ಲೆ ಹಿರೇಕೆರೂರ ತಾಲ್ಲೂಕಿನಲ್ಲಿ ಅನುಷ್ಠಾನದಲ್ಲಿರುವ ವಿವಿಧ ಯೋಜನೆಗಳ ವಿವರ

ಕ್ರ. ಸಂ.	ಜಿಲ್ಲಾ ವಲಯ	ಆರ್ಥಿಕ (ರೂ. ಗಳಲ್ಲಿ)	ಭೌತಿಕ
1.	ಬೀಜದ ತೆಂಗಿನ ಕಾಯಿ ಬಿತ್ತನೆ	31,250-00	5000 ನಂ.
2.	ರೈತರಿಗೆ ತರಬೇತಿ ಯೋಜನೆ	6,000-00	80 ಫಲಾನುಭವಿಗಳು
3.	ವಿಚಾರ ಸಂಕಿರಣ ಹಾಗೂ ಪ್ರದರ್ಶನ	20,000-00	1 ನಂ.
4.	ಪ್ರಚಾರ ಮತ್ತು ಸಾಹಿತ್ಯ	3,000-00	1
5.	ಕ್ಷೇತ್ರ ಸಸ್ಯಾಗಾರಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ	65,000-00	1 ಕಾಮಗಾರಿ
6.	ಸಹಾಯಧನ ರೂಪದಲ್ಲಿ ಸಸ್ಯ ಸಂರಕ್ಷಣಾ ಔಷಧಿ	2,000-00	100 ಫಲಾನುಭವಿಗಳು
7.	ಹಣ್ಣು ಮತ್ತು ತರಕಾರಿ ಸಂಸ್ಕರಣೆ ತರಬೇತಿ	2,950-00	60 ಮಹಿಳೆಯರಿಗೆ
8.	ವಿಶೇಷ ಘಟಕ ಯೋಜನೆ (ರಾಜ್ಯ)	77,500-00	28 ಹೊಸ ತೋಟಗಳ
9.	ವಿಶೇಷ ಘಟಕ ಯೋಜನೆ (ರಾಜ್ಯ ಕೇಂದ್ರ)	19,000-00	ನಿರ್ಮಾಣ ಹಾಗೂ ಇತರೆ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.
	ಒಟ್ಟು ರೂ.	2,44,700-00	

ಇತರೆ ಕಾರ್ಯಕ್ರಮಗಳ ವಿವರ

ತರಬೇತಿ ನೀಡುವುದು 4 ಜನರಿಗೆ ಹಳೆ ತೋಟಗಳ ಪೋಷಣೆ 22 ನಂ. 2-4 ತೆಂಗಿನ ಸಸಿಗಳ ಹಂಚಿಕೆ 130 ಕುಟುಂಬಗಳಿಗೆ

ಕೇಂದ್ರ ವಲಯ ಯೋಜನೆ

1)	ಸಮಗ್ರ ಸಾಂಬಾರು ಬೆಳೆಗಳ ಅಭಿವೃದ್ಧಿ ಯೋಜನೆ.	98275-00	254 ಫಲಾನುಭವಿಗಳು
2)	ಕೇಂದ್ರ ಪುರಸ್ಕೃತ ಉಷ್ಣವಲಯ ಅಭಿವೃದ್ಧಿ ಕಾರ್ಯಕ್ರಮ.	19258-00	15 ”
3)	ಗ್ರಾಮೀಣ ಪ್ರದೇಶದಲ್ಲಿ ಪೌಷ್ಟಿಕ ತೋಟ ನಿರ್ಮಾಣ ಯೋಜನೆ.	4000-00	80 ”

1	2	3	4	5
4)	ಪ್ಲಾಸ್ಟಿಕ್ ಕಲ್ಚರ್	70000-00	46	"
5)	ವೀಳೆದೆಲೆ ಯೋಜನೆ	3750-00	6	ಫಲಾನುಭವಿಗಳು
6)	ಕಂದಮೂಲ ಅಭಿವೃದ್ಧಿ	3000-00	12	"
	ಒಟ್ಟು ರೂ.	19278-00		
		ರಾಜ್ಯ ವಲಯ ಯೋಜನೆ		
1)	ಆಲೂಗಡ್ಡೆ ನಿಜಬೀಜ ಉತ್ಪಾದನೆ	16000-00	6	ಪ್ರಾತ್ಯಕ್ಷತೆ
2)	ಗಿರಿಜನ ಉಪಯೋಜನೆ	15325-00	78	ಫಲಾನುಭವಿಗಳು
3)	ವಿಶೇಷ ಘಟಕ ಯೋಜನೆ	57675-00	542	ತೋಟಗಳ ಸ್ಥಾಪನೆ ಹಾಗೂ ನಿರ್ವಹಣೆ
	ಒಟ್ಟು ರೂ.	89000-00		
		ವಿಶೇಷ ಯೋಜನೆ		
1)	ಉದ್ಯೋಗ ಭರವಸೆ ಯೋಜನೆ	100000-00	35	ಎಕರೆ ಪ್ರದೇಶ ವಿಸ್ತರಣೆ
	ಒಟ್ಟು ರೂ.	631978-00		

ವಿಷಯ:- ರಾಜ್ಯದಲ್ಲಿ ತಲೆದೋರಿರುವ ಛಾಪಾ ಕಾಗದಗಳ ಅಭಾವ ಹಾಗೂ ಶುಲ್ಕ ಏರಿಕೆ.

1428 (1609) **ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾನ್ಯ ಕಂದಾಯ ಸಚಿವರು):-** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯಾದ್ಯಂತ ನೋಂದಣಿ ಶುಲ್ಕ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಛಾಪಾ ಕಾಗದಗಳಿಗೆ ವಿಪರೀತ ಬೇಡಿಕೆಯಿಂದ ಕಾಳಸಂತೆ ವ್ಯಾಪಾರಕ್ಕೆ ಉತ್ತೇಜನವಾಗಿರುವುದು ನಿಜವೇ?

(ಆ) ಈ ಛಾಪಾ ಕಾಗದ ಅಭಾವದ ನಿವಾರಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

(ಅ) ನಿಜವಲ್ಲ.

(ಆ) ಛಾಪಾ ಕಾಗದಗಳ ಅಭಾವ ಉಂಟಾಗದಂತೆ ಈ ಕೆಳಕಾಣಿಸಿದ ಕ್ರಮಗಳನ್ನು ಅನುಸರಿಸಲಾಗುತ್ತಿದೆ:

1. ರಾಜ್ಯದ ಎಲ್ಲಾ ಉಪ–ನೋಂದಣಿ ಕಛೇರಿಗಳಿಗೆ ಉಬ್ಬಚ್ಚು ಯಂತ್ರಗಳನ್ನು ಸರಬರಾಜು ಮಾಡಿ ರೂ. 999-99 ಪೈಸೆಗಳವರೆಗಿನ ಮೌಲ್ಯದ ಮುದ್ರಾಂಕ ಪತ್ರವನ್ನು ಉಬ್ಬಚ್ಚು ಮಾಡಲು ಅವಕಾಶ ಕಲ್ಪಿಸಲಾಗಿದೆ.